ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನ ಕುರಿತು

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

783 (878) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಾನ್ಯ ಶಾಸಕರುಗಳಿಗೆ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನವನ್ನು ವಾರ್ಷಿಕ 200 ಲಕ್ಷಗಳನ್ನು ನಿಗದಿಪಡಿಸಿದ್ದು, ಈ ಪೈಕಿ ಈವರೆವಿಗೂ ಕೇವಲ ರೂ. 50.00 ಲಕ್ಷಗಳನ್ನು ಮಾತ್ರ ಬಿಡುಗಡೆಗೊಳಿಸಲಾಗಿದ್ದು, ಈ ಹಣವು ಸಹ ಏ-2 ಸಮಸ್ಯೆಯಿಂದ 2020ರ ಜನವರಿ ಅಂತ್ಯಕ್ಕೆ ಖಾತೆಗಳಿಗೆ ಜಮೆಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈಗಾಗಲೇ ಮಾರ್ಚ್ 2020ರ ಅಂತ್ಯಕ್ಕೆ ಸಮೀಪದಲ್ಲಿದ್ದರೂ, ಇನ್ನುಳಿದ 150 ಲಕ್ಷಗಳನ್ನು ಬಿಡುಗಡೆಗೊಳಿಸದಿರುವುದಕ್ಕೆ ಕಾರಣಗಳೇನು ; ಉಳಿಕೆ ಹಣ ಬಿಡುಗಡೆ ಮಾಡುವುದು ಯಾವಾಗ;

(ಇ) ಈ ಯೋಜನೆಯ ಕೆ.ಎಲ್.ಎಲ್.ಎ.ಡಿ. ಅನುಷ್ಠಾನಗೊಳಿಸುವ ಪರಮಾಧಿಕಾರವು ಜಿಲ್ಲಾಧಿಕಾರಿಗಳಿಗೆ ಇದ್ದು, ಇದನ್ನು ಇತ್ತೀಚೆಗೆ ಉಪ ವಿಭಾಗಾಧಿಕಾರಿಗಳಿಗೆ ಬದಲಾಯಿಸಲಾಗಿದ್ದು, ಈ ಬದಲಾವಣೆಯಿಂದ ಸರ್ಕಾರಕ್ಕೆ ಯಾವ ರೀತಿಯ ಅನುಕೂಲಗಳು ಆಗುತ್ತವೆ ; ಇದರಿಂದ ಸರ್ಕಾರಕ್ಕೆ ಆಗುವ ಲಾಭಗಳೇನು ; (ವಿವರ ನೀಡುವುದು)

(ಈ) ಏ-2 ಸಮಸ್ಯೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?